# ಮೊಬೈಲ್ ಕ್ಯಾತ್‌ಲ್ಯಾಬ್ ವ್ಯವಸ್ಥೆ

ಹಾಸನ, ಮಾ.28-ಗ್ರಾಮೀಣ ಹಾಗೂ ಅರೇ ಪಟ್ಟಣದ ಜನರ ಅನುಕೂಲಕ್ಕಾಗಿ ವೈವಸ್ ಗ್ರೂಪ್‌ನಿಂದ ಹೃದಯದ ಆರೈಕೆಗಾಗಿ ವೈವಸ್ ಹಾರ್ಟ್ ಕ್ಲಿನಿಕ್‌ನಲ್ಲಿ ಮೊಬೈಲ್ ಕ್ಯಾತ್ ಲ್ಯಾಬ್ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಡಾ॥ಗಿರೀಶ್ ನಾಯರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಇಂದು ಮಾತನಾಡಿದ ಅವರು ಈ ಮೊಬೈಲ್ ಕ್ಯಾತ್ ಲ್ಯಾಬ್ ರಾಜ್ಯದ ಮಂಡ್ಯ, ಹಾಸನ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಸಂಚರಿಸಲಿದೆ ಈವರೆಗೆ 216 ಕ್ಕಿಂತ ಹೆಚ್ಚು ರೋಗಿಗಳನ್ನು ಪರೀಕ್ಷೆ ಮಾಡಿದೆ ಎಂದು ಹೇಳಿದರು.

ಡಾ॥ ಉಮೇಶ್‌ಗುಪ್ತ ಮಾತನಾಡಿ ಶೇ 5 ಗ್ರಾಮೀಣ ಪ್ರದೇಶದ ಜನರು ಹೃದಯರೋಗ, ಸಕ್ಕರೆಕಾಯಿಲೆ ಮತ್ತು ರಕ್ತದೊತ್ತಡ ಕಾಯಿಲೆಗಳಿಂದ ನರಳುತ್ತಿದ್ದರೆ ಶೇ 10-15 ರಷ್ಟು ನಗರ ಪ್ರದೇಶದ ಜನರು ಈ ಕಾಯಿಲೆಯಲ್ಲಿ ನರಳುತ್ತಿದ್ದಾರೆ 30-35 ವಯೋಮಿತಿಯಾದ ಮೇಲೆ ಎಲ್ಲರೂ ಹೃದಯ ಪರೀಕ್ಷೆ ಮಾಡಿಕೊಳ್ಳುವುದು ಒಳಿತು. ಕ್ಯಾತ್‌ಲ್ಯಾಬ್ ವ್ಯವಸ್ಥೆಯಿಂದ ಕಡಿಮೆ ವೆಚ್ಚದಲ್ಲಿ ಮನೆಯ ಮುಂದೆಯೇ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ನಮ್ಮ ಸಂಸ್ಥೆ ಕಲ್ಪಿಸಿದೆ ಎಂದರು.